# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 03.08.2010**

ದಿನಾಂಕ: 30.07.2010 ರಂದು ನವರಂಗ್ ಸಿನಿಮಾ ಮಂದಿರದ ಸಾಯಿ ಕಾಲೇಜ್ ಹತ್ತಿರ ಸೌಮ್ಯ.ಆರ್ ಎಂಬ 18 ವರ್ಷದ ಬಾಲಕಿ ನಡೆದುಕೊಂಡು ಹೋಗುತ್ತಿರುವಾಗ ಮರದ ಕೊಂಬೆ ಮುರಿದು ಅವಳ ಮೇಲೆ ಬಿದ್ದು, ಗಾಯಗೊಂಡಿರುವ ಘಟನೆ ಜರುಗಿರುತ್ತದೆ. ಬಾಲಕಿಯನ್ನು ತಕ್ಷಣವೇ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಸೇರಿಸಿ ತುರ್ತುನಿಗಾ ಘಟಕದಲ್ಲಿ ದಾಖಲೆ ಮಾಡಿ, ತಜ್ಞ ವೈದ್ಯರಿಂದ ಶುಶ್ರೂಷೆ ನೀಡಲಾಗುತ್ತಿದೆ. ಬಾಲಕಿಗೆ ರೈಟ್ ಸೈಡ್ ಕಾಲರ್ ಬೋನ್, ಲ್ಯಾಸಿರೇಟೆಡ್ ಇಂಜ್ಯುರಿ ಲಿವರ್, ಇಂಜ್ಯುರಿ ಓವರ್ ದ ರೈಡ್ ಕಿಡ್ನಿ, ಕಂಪ್ರೆಷನ್ ಎಲ್‌ಒನ್ ವರ್ಟಿಬ್ರ ಹೀಗೆ ನಾಲ್ಕು ಪ್ರಮುಖ ಗಾಯಗಳಾಗಿರುತ್ತದೆ.

ಗಾಯಗೊಂಡಿರುವ ಬಾಲಕಿಯು ಸಂಪೂರ್ಣವಾಗಿ ಗುಣಮುಖವಾಗುತ್ತಿದ್ದಾಳೆ. ಇವರ ಚಿಕಿತ್ಸೆಗಾಗಿ ತಗಲುವ ಪೂರ್ಣ ವೆಚ್ಚವನ್ನು ಪಾಲಿಕೆಯಿಂದ ಭರಿಸಲಾಗುತ್ತಿದೆ. ಇದುವರೆವಿಗೆ ಸುಮಾರು 50,000/- ರೂ.ಗಳು ಚಿಕಿತ್ಸೆಗೆ ವೆಚ್ಚವಾಗಿರುತ್ತದೆ. ಮುಂದೆ ನೀಡಲಾಗುವ ಚಿಕಿತ್ಸೆಗಾಗಿ ತಗಲುವ ವೆಚ್ಚವನ್ನು ಕೂಡಾ ಪಾಲಿಕೆಯಿಂದ ಭರಿಸಲಾಗುವುದೆಂದು ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

ರೋಗಿಗೆ ಚಿಕಿತ್ಸೆ ನೀಡುವ ಮತ್ತು ಅವಶ್ಯಕ ಸಹಾಯವನ್ನು ಮಾಡುವ ಜವಾಬ್ದಾರಿಯನ್ನು ಡಾ|| ವಿಜಯಕುಮಾರ್ ಎಸ್. ಬಿರಾದಾರ್, ಆರೋಗ್ಯ ವೈದ್ಯಾಧಿಕಾರಿ (ಮಲ್ಲೇಶ್ವರಂ) ರವರು ನೋಡಿಕೊಳ್ಳುತ್ತಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**